ದಿನಾಂಕ:16.01.2021ರಂದು ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಹಾಗೂ ಚೈಲ್ಡ್‌ಲೈನ್ ಇಂಡಿಯಾ ಫೌಂಡೇಶನ್, ದಕ್ಷಿಣ ಭಾರತದ ಅಧಿಕಾರಿಗಳ ನಡುವೆ ನಡೆದ ಸಭೆಯ ಸಭಾ ನಡಾವಳಿಗಳು ಹಾಗೂ ಸಭೆಯಲ್ಲಿ ಚರ್ಚಿಸಲಾದ, ತೀರ್ಮಾನ ಕೈಗೊಳ್ಳಲಾದ ಪ್ರಧಾನ ಅಂಶಗಳು ಕೆಳಕಂಡಂತಿರುತ್ತವೆ.

1. ಮಕ್ಕಳ ರಕ್ಷಣಾ ನಿರ್ದೇಶಕರು ಚೈಲ್ಡ್‌ಲೈನ್ ಇಂಡಿಯಾ ಪೌಂಡೇಶನ್ ಜೊತೆ ಒಂದು ಎಂಒಯು ಮಾಡಿಕೊಳ್ಳಲು ಯೋಚಿಸಲಾಗುತ್ತಿದೆ ಎಂದು ತಿಳಿಸಿ ಈ ಬಗ್ಗೆ ಯೋರೊಂದಿಗೆ ಎಂಒಯು ಮಾಡಿಕೊಳ್ಳಬಹುದು. ರಾಜ್ಯಮಟ್ಟದಲ್ಲಿ ಯಾವುದಾದರೂ ಚೈಲ್ಡ್ ಲೈನ್ ವ್ಯವಸ್ಥೆ ಇರುವ ಕುರಿತು ಚರ್ಚಿಸಿದರು. ಅದಕ್ಕೆ ಚೈಲ್ಡ್‌ಲೈನ್ ಇಂಡಿಯಾ ಪೌಂಡೇಶನ್ ರವರು ದೆಹಲಿ ಮಟ್ಟದ ವ್ಯವಸ್ಥೆಯೊಂದಿಗೆ ಎಂಒಯು ಮಾಡಿಕೊಳ್ಳಬೇಕಾಗಿರುತ್ತದೆಂದು ಉತ್ತರಿಸಿರುತ್ತಾರೆ. ಅದರಂತೆ ಎಕ್ಸಿಕ್ಯೂಟೀವ್ ಡೈರೆಕ್ಟರ್, ಚೈಲ್ಡ್‌ಲೈನ್ ಇಂಡಿಯಾ ಪೌಂಡೇಶನ್ ಇವರಿಗೆ ಪತ್ರ ಬರೆಯಬೇಕೆಂದೂ ಸಹ ತಿಳಿಸಿರುತ್ತಾರೆ.

(ಕ್ರಮ: ಆಡಳಿತ ಶಾಖೆ)

2. ಚೈಲ್ಡ್‌ಲೈನ್ ಇಂಡಿಯಾ ಪೌಂಡೇಶನ್‌ಗೆ ಅಜೀಮ್ ಪ್ರೇಮ್‌ಜಿ ಪೌಂಡೇಶನ್‌ನಿಂದ ಬಿಬಿಎಂಪಿ 8 ವಲಯಗಳಲ್ಲಿ 8 ವಾಹನಗಳನ್ನು ಒದಗಿಸಲು ಅವಕಾಶವಿದೆ ಎಂದು ಬಿಬಿಎಂಪಿಯ ಸ್ಪೆಷಲ್ ಕಮಿಷನರ್(ವೆಲ್‌ಫೇರ್) ರವರು ತಿಳಿಸಿದ್ದು, ಈ ಬಗ್ಗೆ ಚೈಲ್ಡ್‌ಲೈನ್ ಇಂಡಿಯಾ ಪೌಂಡೇಶನ್‌ರವರಿಂದ ಸ್ಪಂದನೆಯನ್ನು ಕೋರಲಾಗಿರುತ್ತದೆ. ಅದರಂತೆ ಸಿಎಲ್‌ಐಎಫ್‌ರವರು ಕೆಲವು ದಿನಗಳಲ್ಲಿ ಉತ್ತರಿಸುವುದಾಗಿ ತಿಳಿಸಿರುತ್ತಾರೆ.

(ಕ್ರಮ:ಚೈಲ್ಡ್‌ಲೈನ್)

3. ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರು ಚೈಲ್ಡ್‌ಲೈನ್ ಇಂಡಿಯಾ ಪೌಂಡೇಶನ್‌ಗೆ ಸಂಕಷ್ಟದಲ್ಲಿರುವ ಮಕ್ಕಳ ಮಾಹಿತಿ ನೀಡಿದವರಿಗೆ ಕಾಲ್‌ಬ್ಯಾಕ್ ಮಾಡಿ ಸದರಿ ಮಗುವಿಗೆ ಚೈಲ್ಡ್‌ಲೈನ್ ಇಂಡಿಯಾ ಪೌಂಡೇಶನ್‌ವತಿಯಿಂದ ನೀಡಲಾದ ನೆರವಿನ ಬಗ್ಗೆ ಮಾಹಿತಿ ನೀಡಲು ಸಾಧ್ಯವಿದೆಯೇ ಎಂದು ವಿಚಾರಿಸಿದಾಗ ಈ ರೀತಿಯ ಪ್ರೋಟೋಕಾಲ್ ಚೈಲ್ಡ್‌ಲೈನ್‌ಗೆ ಇಲ್ಲವೆಂದು ತಿಳಿಸಿ, ಆದಾಗ್ಯೂ ಫಾಲೋಅಪ್ ಅಡಿಯಲ್ಲಿ ಅವರಿಗೆ ಮಾಹಿತಿ ತಿಳಿಸಲು ಸಹಕರಿಸುವುದಾಗಿ ತಿಳಿಸಿರುತ್ತಾರೆ.

(ಕ್ರಮ:ಚೈಲ್ಡ್‌ಲೈನ್)

4. ಕೇರಳ ಚೈಲ್ಡ್‌ಲೈನ್ ಫೋರಂ ಬಗ್ಗೆ ನಿರ್ದೇಶಕರು ಪ್ರಸ್ತಾಪಿಸಿ, ಈ ರೀತಿ ಕರ್ನಾಟಕದಲ್ಲಿ ಮಾಡಬಹುದೇ ಎಂದು ಕೇಳಿದಾಗ ಕೇರಳ ಚೈಲ್ಡ್‌ಲೈನ್ ಫೋರಂ ಒಂದು ಅಧಿಕೃತ ಸಂಸ್ಥೆ ಅಲ್ಲವೆಂದು ಹಾಗೂ ಅದಕ್ಕೆ ಯಾವುದೇ ಅನುದಾನ ಇಲ್ಲದೇ ಇರುವುದರಿಂದ ಅದು ಸಕ್ರಿಯವಾಗಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. ಜೊತೆಗೆ ಕರ್ನಾಟಕದಲ್ಲಿ ಅಂತಹ ಒಂದು ಸಂಸ್ಥೆಯನ್ನು ಮಾಡಿಕೊಳ್ಳುವ ಬದಲು ರೆಗ್ಯುಲರ್ ತರಬೇತಿ ಮತ್ತು ಹೆಚ್ಚಿನ ಇಂಟರಾಕ್ಷನ್ ಮೂಲಕ ಚೈಲ್ಡ್‌ಲೈನ್‌ನ ಹೆಚ್ಚುವರಿ ಎಸ್ಪಿರಿಟ್ ಡಿಕಾರ್ಪ್ಸ್(**Espirit De corps**) ಸಾಧಿಸಬಹುದೆಂದು ತಿಳಿಸಿರುತ್ತಾರೆ.

(ಕ್ರಮ:ತರಬೇತಿ ಮತ್ತು ಐಇಸಿ)

5. ಚೈಲ್ಡ್‌ಲೈನ್ ಫೋರಂ ಮಾಡಿಕೊಳ್ಳುವುದರ ಬಗ್ಗೆ ಚೈಲ್ಡ್‌ಲೈನ್ ರವರು ಸಕ್ರಿಯವಾಗಿ ಸ್ಪಂದಿಸದೇ ಇರುವುದರಿಂದ ನಿರ್ದೇಶಕರು ಎಲ್ಲಾ ಜಿಲ್ಲೆಗಳ ಚೈಲ್ಡ್‌ಲೈನ್ ಭಾಗೀದಾರರ ವಾಟ್ಸ್‌ಅಪ್ ಸಮೂಹವನ್ನು ಪ್ರಾರಂಭಿಸಲಾಗುವುದೆಂದು ತಿಳಿಸಿರುತ್ತಾರೆ.

(ಕ್ರಮ:ಎಂ.ಐ.ಎಸ್. ಕೋ–ಆರ್ಡಿನೇಟರ್)

6. ಚೈಲ್ಡ್‌ಲೈನ್ ತಂಡಗಳಿಗೆ ಒಂದು ಐ.ಡಿ. ಕಾರ್ಡ್‌ಗಳನ್ನು ಒದಗಿಸುವ ಬಗ್ಗೆ ಚರ್ಚಿಸಲಾಗಿ ಇಲಾಖಾ ವತಿಯಿಂದ ಜಿಲ್ಲಾಧಿಕಾರಿಗಳು ಹಾಗೂ ಚೈಲ್ಡ್‌ಲೈನ್ ವತಿಯಿಂದ ಚೈಲ್ಡ್‌ಲೈನ್ ಅಧಿಕಾರಿಗಳು ಜಂಟಿಯಾಗಿ ಸಹಿ ಮಾಡಿರುವ ಐ.ಡಿ. ಕಾರ್ಡ್‌ಗಳನ್ನು ಚೈಲ್ಡ್‌ಲೈನ್‌ರವರಿಗೆ ಒದಗಿಸುವುದು ಸೂಕ್ತವೆಂದು ಭಾವಿಸಲಾಗಿ ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.

(ಕ್ರಮ:ಆಡಳಿತ ಶಾಖೆ)

7. ರಿಟ್ ಅರ್ಜಿ ಸಂ.10096/2020ರ ಹಿನ್ನೆಲೆಯಲ್ಲಿ ಬಿಬಿಎಂಪಿ ಏರಿಯಾದಲ್ಲಿ ಚೈಲ್ಡ್‌ಲೈನ್‌ನವರನ್ನು ಬಲಪಡಿಸುವ ಅವಶ್ಯಕತೆ ತುಂಬಾ ತುರ್ತಾಗಿ ಮಾಡಬೇಕಾಗಿರುವುದರಿಂದ ಈ ಬಗ್ಗೆ ಈಗಾಗಲೇ ಬಿಬಿಎಂಪಿ ಚೈಲ್ಡ್‌ಲೈನ್ ನವರೊಂದಿಗೆ ಸಭೆಯನ್ನು ನಡೆಸಿ, ಬಿಬಿಎಂಪಿ ಚೈಲ್ಡ್‌ಲೈನ್‌ನ್ನು ಬಲಪಡಿಸುವ ಸಲುವಾಗಿ ಸಲಹೆ ಸೂಚನೆಗಳನ್ನು ಪಡೆಯಲಾಗಿದ್ದು, ಅದರಂತೆ ಬೆಂಗಳೂರಿನಲ್ಲಿ 2 ಕೊಲ್ಯಾಬೊರೇಟೀವ್ ಏಜೆನ್ಸಿರವರು ಅವರಿಗೆ 10 ಸಿಬ್ಬಂದಿ ಮತ್ತು 2 ವಾಹನಗಳು ಹೆಚ್ಚುವರಿಯಾಗಿ ಬೇಕಾಗಿರುವುದಾಗಿ ತಿಳಿಸಿರುತ್ತಾರೆ. ಈ ವಿಷಯವನ್ನು, ನಿರ್ದೇಶಕರು, ಚೈಲ್ಡ್‌ಲೈನ್‌ನವರೊಂದಿಗೆ ಚರ್ಚಿಸಲಾಗಿ ಅವರು ಪ್ರಸ್ತುತ ಇರುವ ಕೊಲ್ಯಾಬೊರೇಟೀವ್ ಏಜೆನ್ಸಿಗಳಿಗೆ ಹೆಚ್ಚು ಸಿಬ್ಬಂದಿ ಮತ್ತು ವಾಹನಗಳನ್ನು ನೀಡುವುದ ಬದಲಾಗಿ ಹೆಚ್ಚುವರಿ ಕೊಲ್ಯಾಬೊರೇಟೀವ್ ಏಜೆನ್ಸಿಗಳನ್ನು ಮಾಡಿಕೊಳ್ಳುವುದು ಸೂಕ್ತವೆಂದು ತಿಳಿಸಿ, ಈ ಕುರಿತು ಹೆಚ್ಚುವರಿ ಕೊಲ್ಯಾಬೊರೇಟೀವ್ ಏಜೆನ್ಸಿಗಳನ್ನು ಒದಗಿಸಲು ಎಕ್ಸಿಕ್ಯೂಟೀವ್ ಡೈರೆಕ್ಟರ್, ಚೈಲ್ಡ್‌ಲೈನ್ ಇಂಡಿಯಾ ಫೌಂಡೇಶನ್ ರವರಿಗೆ ಪತ್ರ ಬರೆಯಲು ಕೋರಿರುತ್ತಾರೆ. ಅದರಂತೆ ನಿರ್ದೇಶಕರು ಪತ್ರ ಬರೆಯಲು ಒಪ್ಪಿಕೊಂಡಿರುತ್ತಾರೆ.

(ಕ್ರಮ:ಮಕ್ಕಳ ರಕ್ಷಣಾ ವಿಭಾಗ)

8. ಬಸ್ ಟರ್ಮಿನಲ್ಸ್‌ಗಳಲ್ಲೂ ಸಹ ಚೈಲ್ಡ್‌ಲೈನ್ ತಂಡಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದ್ದು, ಈ ಕುರಿತು ಕರ್ನಾಟಕ ಟ್ರಾನ್ಸ್‌ಪೋರ್ಟ್ ಇಲಾಖೆಯವರಿಗೆ ಪತ್ರ ಬರೆದು ಸಹಕರಿಸಬೇಕೆಂದು ಚೈಲ್ಡ್ಲೈನ್‌ನವರು ಕೋರಿರುತ್ತಾರೆ. ಅದರಂತೆ ನಿರ್ದೇಶಕರು, ಬಸ್ ಟರ್ಮಿನಲ್ಸ್‌ಗಳಲ್ಲಿ ಚೈಲ್ಡ್‌ಲೈನ್‌ಗಳನ್ನು ಪ್ರಾರಂಭಿಸುವ ಸಲುವಾಗಿ ಚೈಲ್ಡ್‌ಲೈನ್‌ನವರಿಗೆ ಏನು ಅವಶ್ಯಕತೆ ಇದೆ ಎಂಬುದರ ಕುರಿತು ನಿರ್ದೇಶಕರಿಗೆ ಒಂದು ಪತ್ರ ಬರೆದಲ್ಲಿ ನಂತರ ನಿರ್ದೇಶಕರು ಟ್ರಾನ್ಸ್‌ಪೋರ್ಟ್ ವಿಭಾಗದವರಿಗೆ ಪತ್ರವನ್ನು ಬರೆಯಲಾಗುವುದೆಂದು ತಿಳಿಸಿರುತ್ತಾರೆ.

(ಕ್ರಮ:ಚೈಲ್ಡ್‌ಲೈನ್)

9. ಈಗಾಗಲೇ ಜಿಲ್ಲಾ ಮಟ್ಟದಲ್ಲಿ ವಿವಿಧ ಇಲಾಖೆಗಳು ಮತ್ತು ಚೈಲ್ಡ್‌ಲೈನೊಂದಿಗೆ ಸಮನ್ವಯ ಸಭೆಗಳನ್ನು ನಡೆಸಲು ನಿರ್ದೇಶಕರು ಪತ್ರವನ್ನು ನೀಡಿದ್ದು, ಈ ಬಗ್ಗೆ ಚೈಲ್ಡ್‌ಲೈನ್‌ನವರು ಧನ್ಯವಾದಗಳನ್ನು ವ್ಯಕ್ತಪಡಿಸಿರುತ್ತಾರೆ ಹಾಗೂ ಸದರಿ ಸಭೆಗಳಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳವರನ್ನು ಅಧಿಕೃತವಾಗಿ ಸೇರಿಸದೇ ಇರುವುದರಿಂದ ಜಿಲ್ಲಾ ಮಟ್ಟದಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳವರು ಈ ಸಭೆಗಳಲ್ಲಿ ಭಾಗವಹಿಸಲು ಇಚ್ಛೆ ವ್ಯಕ್ತಪಡಿಸುತ್ತಿಲ್ಲವೆಂದು ಗಮನಕ್ಕೆ ತಂದು ಈ ಸಭೆಗಳಲ್ಲಿ ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲನ್ಯಾಯ ಮಂಡಳಿಯವರನ್ನೂ ಸಹ ಭಾಗವಹಿಸಲು ಕೋರುತ್ತಾ ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲನ್ಯಾಯ ಮಂಡಳಿಯವರನ್ನು ಸೇರಿಸಿ ಒಂದು ಹೊಸ ಪತ್ರವನ್ನು ಬರೆಯಲು ಚೈಲ್ಡ್‌ಲೈನ್ ರವರು ಕೋರಿದ್ದು, ಇದಕ್ಕೆ ನಿರ್ದೇಶಕರು ಒಪ್ಪಿಗೆಯನ್ನು ವ್ಯಕ್ತಪಡಿಸಿರುತ್ತಾರೆ.

(ಕ್ರಮ:ಮಕ್ಕಳ ರಕ್ಷಣಾ ವಿಭಾಗ)

ಕೊನೆಗೆ ಪರಸ್ಪರ ಧನ್ಯವಾದಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.